The Resource Centre

Press Clipping

Publication : **Vijayavani**
Date : **June 6, 2016**
Edition : **Bangalore**
Page : **1+4, Namaste Bengaluru**



| ಗಣೇಶ್, ನೇಹಾ

ನಿರುತ್ತರದ ಬಗ್ಗೆ ನೀಲಾದ್ರಿ ಉತ್ತರ!

ಆಲ್ಬಮ್‌ನಿಂದ ಸಿನಿಮಾವರೆಗೆ, ಜಿಟಾರ್ ಮಾಂತ್ರಿಕ...

ಭಾರತ ಶಾಸ್ತ್ರೀಯ ಸಂಗೀತ ಲೋಕದ ದಿಗ್ಗಜರಲ್ಲಿ ನೀಲಾದ್ರಿ ಕುಮಾರ್ ಕೂಡ ಒಬ್ಬರು. ಸಿತಾರ್ ಮತ್ತು ಗಿಟಾರ್‌ಗಳನ್ನು ಸೇರಿಸಿ ಜಿಟಾರ್ ಎಂಬ ಸಂಗೀತ ಸಾಧನ ಕಂಡು ಹಿಡಿದಿರುವ ಖ್ಯಾತಿ ಅವರಿಗೆ ಸಲ್ಲುತ್ತದೆ. ಜಾಕಿರ್ ಹುಸೇನ್, ಎ.ಆರ್.ರೆಹಮಾನ್ ಸೇರಿದಂತೆ ಹಲವು ಸಂಗೀತಲೋಕದ ಧ್ರುವತಾರೆಗಳೊಂದಿಗೆ ಕೆಲಸ ಮಾಡಿರುವ ನೀಲಾದ್ರಿ, ಆಲ್ಬಮ್ ಹಾಡುಗಳ ಮೂಲಕ ಸಾಕಷ್ಟು ಹೆಸರು ಮಾಡಿದ್ದಾರೆ. ಇದೇ ಮೊದಲ ಬಾರಿಗೆ ಕನ್ನಡದ 'ನಿರುತ್ತರ' ಚಿತ್ರದ ಮುಖೇನ ಸಿನಿಮಾ ಸಂಗೀತ ನಿರ್ದೇಶಕರಾಗಿರುವ ಅವರು, ವಿಜಯವಾಣಿಯೊಂದಿಗೆ ಮಾತನಾಡಿದ್ದಾರೆ. ಇಲ್ಲಿದೆ ಅವರೊಂದಿಗಿನ ಚಿಟ್‌ಚ್ಯಾಟ್...

ಬ್ಯಾಡನೂರು ಹರ್ಷವರ್ಧನ್

'ನಿರುತ್ತರ' ಮೂಲಕ ಸಂಗೀತ ನಿರ್ದೇಶಕರಾಗಿದ್ದೀರಿ...

- ನನಗೆ ನಟಿ ಭಾವನ ಹಲವು ದಿನಗಳಿಂದ ಗೊತ್ತು. ಅವರ ಹೋಮ್ ಪ್ರೊಡಕ್ಷನ್‌ನಲ್ಲಿ ಈ ಹಿಂದೆ ಕೆಲಸ ಮಾಡಿದ್ದೆ. ಅವರು ನನ್ನ ಆಲ್ಬಮ್ ಹಾಡುಗಳನ್ನು ಕೇಳುತ್ತಿದ್ದರು, ಇಷ್ಟಪಟ್ಟಿದ್ದರು. ಆಗ, ಮುಂದೆ ಸಿನಿಮಾ ಮಾಡುವುದಾದರೆ, ನನ್ನಿಂದಲೇ ಸಂಗೀತ ನಿರ್ದೇಶನ ಮಾಡಿಸುವುದಾಗಿ ಹೇಳುತ್ತಿದ್ದರು. ಅದರಂತೆ ಅವರು ಆಫರ್ ಮಾಡಿದಾಗ, ನಾನು ಸಂತೋಷದಿಂದ ಒಪ್ಪಿಕೊಂಡೆ.

| ನೀಲಾದ್ರಿ

ನಿಮ್ಮ ಸಂಗೀತ ಮತ್ತು ರಸಲ್ ಪೂಕುಟ್ಟಿಯವರ ಸೌಂಡ್ ಡಿಸೈನ್ ಸೇರಿ 'ನಿರುತ್ತರ' ಮತ್ತೊಂದು ಹಂತಕ್ಕೇರಿದೆ ಎನ್ನಲಾಗುತ್ತಿದೆ...

- ಪ್ರಾಮಾಣಿಕನಾಗಿ ಹೇಳಬೇಕೆಂದರೆ ಈ ಚಿತ್ರದಲ್ಲಿ ಹಲವಾರು ಸೃಜನಾತ್ಮಕ ಮಂದಿ ಕೆಲಸ ಮಾಡಿದ್ದಾರೆ. ದೊಡ್ಡವರಾದರೇನು, ಚಿಕ್ಕವರಾದರೇನು, ಸಾಮಾನ್ಯ ಜನರ ಮನಸ್ಸು ಮುಟ್ಟಲಿಲ್ಲ ಎಂದರೆ ಅದು ನಿಷ್ಪ್ರಯೋಜಕ. ನಮ್ಮ ಕೆಲಸ ಜನರನ್ನು ತಲುಪಿ, ಅವರು ಇಷ್ಟಪಟ್ಟರೆ ಅದೇ ನಿಜವಾದ ಯಶಸ್ಸು.

ಹೇಗಿತ್ತು ಸಿನಿಮಾಗೆ ಸಂಗೀತ ಸಂಯೋಜಿಸಿದ ಅನುಭವ?

- ಒಂದೊಳ್ಳೆ ತಂಡದೊಂದಿಗೆ ಕೆಲಸ ಮಾಡಲು ಅವಕಾಶ ಸಿಕ್ಕಿದ್ದಕ್ಕೆ ದೇವರಿಗೆ ಥ್ಯಾಂಕ್ಸ್ ಹೇಳಲು ಇಷ್ಟಪಡುತ್ತೇನೆ. ಭಾವನಾ, ಅಪೂರ್ವ ಕಾಸರವಳ್ಳಿ ಅವರಲ್ಲಿ ಅದ್ಭುತ ಆಲೋಚನೆಗಳಿವೆ, ಸೃಜನಶೀಲತೆಯಿದೆ. 'ನಿರುತ್ತರ' ಸಿನಿಮಾ ವಿಷಯವೇ, ಹಾಡುಗಳಿಗೆ ಒಳ್ಳೆ ವೇದಿಕೆ ಕಲ್ಪಿಸುತ್ತದೆ. ಹಾಡುಗಳೂ ಸಿನಿಮಾಗೆ ಪೂರಕವಾಗಿವೆ. ಸಾಮಾನ್ಯವಾಗಿ ಸಿನಿಮಾಗಳಲ್ಲಿ ಜನರನ್ನು ಸೆಳೆಯಲು ಹಾಡುಗಳನ್ನು ಬಳಸಲಾಗುತ್ತೆ. ಆದರೆ ಈ ಚಿತ್ರದಲ್ಲಿ ಸಂಗೀತಕ್ಕೂ ಕಥೆಯಷ್ಟೇ ಪ್ರಾಮುಖ್ಯತೆಯಿದೆ. ನನಗೂ ಉತ್ತಮ ರೀತಿಯಲ್ಲಿ ಸಂಗೀತ ಸಂಯೋಜಿಸಲು ತುಂಬ ಸ್ಕೋಪ್ ಇತ್ತು.

ಹಾಡುಗಳ ಕುರಿತು ಹೇಳಿ?

- 'ನಿರುತ್ತರ'ದಲ್ಲಿ 7 ವಿಭಿನ್ನ ಹಾಗೂ ವೈವಿಧ್ಯಮಯ ಹಾಡುಗಳಿವೆ. ಶುದ್ಧ ಶಾಸ್ತ್ರೀಯ ಸಂಗೀತದಿಂದ ಹಿಡಿದು ರಾಕ್ ಮ್ಯೂಸಿಕ್‌ಅನ್ನು ಬಳಸಿದ್ದೇನೆ. 'ಐಗಿರಿ ನಂದಿನಿ' ದೇವಿ ಸ್ತೋತ್ರ, ಕೆಲ ಸೋಲೋ ಹಾಗೂ ಡ್ಯೂಯೆಟ್‌ಗಳಿವೆ. ಎಲ್ಲ ಹಾಡುಗಳಿಗೂ ಸಮ ಶ್ರಮ, ಶ್ರದ್ಧೆಯಿಂದ ಕೆಲಸ ಮಾಡಿದ್ದೇನೆ. ಎಲ್ಲಕ್ಕೂ ಪ್ರಾಮುಖ್ಯತೆ ನೀಡಿದ್ದೇನೆ. ಎಲ್ಲಿಯೂ ಅನವಶ್ಯಕವಾಗಿ ತಲೆ ಹಾಕದೆ ಕಥೆಗೆ ಪೂರಕವಾಗಿ, ಅದನ್ನು ಮುಂದೆ ಕೊಂಡೊಯ್ಯುವಂತಹ ಹಾಡುಗಳಿವು. ಒಂದು ಹಾಡಿಗೂ ಇನ್ನೊಂದಕ್ಕು ಹೋಲಿಕೆಯಿಲ್ಲ. ಎಲ್ಲ ಹಾಡುಗಳಿಗೆ ಮೆಲೊಡಿ ಟಚ್ ಕೊಟ್ಟಿದ್ದೇನೆ.

ಆಲ್ಬಮ್ ಸಂಗೀತಕ್ಕೂ, ಸಿನಿಮಾ ಸಂಗೀತಕ್ಕೂ ಸಾಮ್ಯತೆಯಿದೆಯಾ?

- ಇಲ್ಲ, ಆಲ್ಬಮ್ ನನ್ನ ವೈಯಕ್ತಿಕ. ನನಗಿಷ್ಟ ಬಂದಂತೆ, ಏನು ಬೇಕೋ ಅದನ್ನು ಮಾಡುತ್ತೇನೆ. ಆದರೆ ಸಿನಿಮಾದಲ್ಲಿ ಹಾಗಿಲ್ಲ. ಇಲ್ಲಿ ಹಲವು ವಿಷಯಗಳನ್ನು ಮನಸಿನಲ್ಲಿಟ್ಟುಕೊಂಡಿರಬೇಕು. ಕಥೆಯನ್ನು ಗಮನದಲ್ಲಿಟ್ಟುಕೊಂಡು ಅದಕ್ಕೆ ಪೂರಕವಾಗಿ ಸಂಗೀತ ಮಾಡಬೇಕು. ಕಥೆಯೇ ಸಿನಿಮಾದ ನಾಯಕ. ಹೀಗಾಗಿಯೇ ಉಳಿದೆಲ್ಲವೂ ಅದಕ್ಕೆ ಹೊಂದಿಕೊಂಡು, ಸಪೋರ್ಟ್ ಸಿಸ್ಟಮ್‌ನಂತೆ ಕೆಲಸ ಮಾಡಬೇಕು. ಎರಡೂ ವಿಭಿನ್ನ ವಿಧಾನ. ಅದೂ ಅಲ್ಲದೆ ಆಲ್ಬಮ್‌ನಲ್ಲಿ ದೃಶ್ಯಗಳಿರುವುದಿಲ್ಲವಲ್ಲಾ...

ಬಾಲಿವುಡ್ ಚಿತ್ರಕ್ಕೂ ಸಂಗೀತ ಸಂಯೋಜನೆ ಮಾಡುತ್ತಿದ್ದೀರಂತೆ?

ಹೌದು, 'ಶೋರ್‌ಗುಲ್' ಎಂಬ ಚಿತ್ರದ ಒಂದು ಹಾಡಿಗೆ ಸಂಗೀತ ನೀಡಿದ್ದೇನೆ. ಜಿತೇಂದ್ರ ತಿವಾರಿ ಮತ್ತು ಪಿ.ಸಿಂಗ್ ನಿರ್ದೇಶಿಸಿರುವ ಚಿತ್ರವದು. ವಿಶೇಷ ಅಂದರೆ ಮಾಜಿ ಕೇಂದ್ರ ಸಚಿವ ಕಪಿಲ್ ಸಿಬಲ್ ಈ ಚಿತ್ರಕ್ಕೆ ಸಾಹಿತ್ಯ ಬರೆದಿದ್ದಾರೆ.

Page 4

ನಿರುತ್ತರದ ಬಗ್ಗೆ ನೀಲಾದ್ರಿ ಉತ್ತರ!

Page 1

ಕನ್ನಡ ಬಾರದೇ ಇದ್ದುದು, ಸಂಗೀತ ಸಂಯೋಜನೆಯಲ್ಲಿ ಸಮಸ್ಯೆಯಾಗಿತ್ತಾ?

- ಈ ವಿಷಯದಲ್ಲಿ ಭಾವನಾ ಅವರಿಗೆ ಕ್ರೆಡಿಟ್ ನೀಡಲು ಇಷ್ಟಪಡುತ್ತೇನೆ. ನನ್ನ ಮನಸಿನಲ್ಲಿದ್ದ ಮೆಲೊಡಿಯನ್ನು ಭಾವನಾ, ಕಥೆಯ ಎಮೋಷನ್ಸ್‌ಗೆ ಹೊಂದುವಂತೆ ಚಿತ್ರಸಾಹಿತಿ ಕವಿರಾಜ್ ಅವರಿಗೆ ತಿಳಿಸುತ್ತಿದ್ದರು. ಹೀಗಾಗಿಯೇ ಕವಿರಾಜ್ ಪ್ರತಿಯೊಂದು ಪದವನ್ನೂ ತುಂಬ ಎಚ್ಚರಿಕೆಯಿಂದ ಉಪಯೋಗಿಸಿ ಹಾಡುಗಳನ್ನು ಬರೆದಿದ್ದಾರೆ. ಸಾಹಿತ್ಯ ಸಂಗೀತಕ್ಕೆ ಸರಿಹೊಂದುವ ಜತೆಗೆ ಪ್ರತಿಯೊಂದು ಪದದ ಅರ್ಥವೂ ಸನ್ನಿವೇಶಕ್ಕೆ ಹೋಲುವಂತಿರಬೇಕು, ಆ ಬಗ್ಗೆ ನಾನು ಕವಿರಾಜ್ ತುಂಬ ಚರ್ಚಿಸಿದ್ದೇವೆ.

ಹಾಗಾದರೆ ಇನ್ನು ಮುಂದೆ ನಿಮ್ಮ ಸಂಗೀತವನ್ನು ಸಿನಿಮಾಗಳಲ್ಲೂ ಹೆಚ್ಚೆಚ್ಚು ಕೇಳಬಹುದು?

- ನಾನಂತೂ ಸಿನಿಮಾಗಳಿಗೆ ಸಂಗೀತ ನೀಡಲು ಸಿದ್ಧ. ಆದರೆ ಮೊದಲು 'ನಿರುತ್ತರ' ಹಾಡುಗಳು ಜನರಿಗೆ ಇಷ್ಟವಾಗುತ್ತವೆ ಅನ್ನೋ ಭರವಸೆಯಿದೆ. ನಾನು ಮುಂಬೈನಲ್ಲಿದ್ದೇನೆ. ಕನ್ನಡ ಚಿತ್ರರಂಗ ಇರುವುದು ಬೆಂಗಳೂರಿನಲ್ಲಿ. ಅಲ್ಲಿನ ಜನರ ಸಂಗೀತದ ಕುರಿತ ಇಷ್ಟಗಳು ಮತ್ತು ಇಲ್ಲಿನ ಸಂಗೀತಾಭಿರುಚಿ ನಡುವೆ ವ್ಯತ್ಯಾಸಗಳಿದ್ದರೂ, ಸಂಗೀತಕ್ಕೆ ಗಡಿಯಿಲ್ಲ ಎಂಬುದಕ್ಕೆ 'ನಿರುತ್ತರ' ಒಂದೊಳ್ಳೆ ಉದಾಹರಣೆ. ನಾನು ಎಷ್ಟು ಇಷ್ಟಪಟ್ಟು ಈ ಹಾಡುಗಳನ್ನು ಮಾಡಿದ್ದೀನೋ, ಜನರಿಗೂ ಅಷ್ಟೇ ಇಷ್ಟವಾದರೆ, ಅದೇ ದೊಡ್ಡ ಆಶೀರ್ವಾದ.

ಹೊಸ ಆಲ್ಬಮ್‌ಅನ್ನು ಯಾವಾಗ ನಿರೀಕ್ಷಿಸಬಹುದು?

- ಅಕ್ಟೋಬರ್ ಅಥವಾ ದೀಪಾವಳಿ ಹಬ್ಬಕ್ಕೂ ಮುನ್ನ ಹೊಸ ಮ್ಯೂಸಿಕ್ ಆಲ್ಬಮ್ ರಿಲೀಸ್ ಮಾಡುವ ಐಡಿಯಾ ಇದೆ. ಸದ್ಯ ಅದೇ ಕೆಲಸಗಳು ಭರದಿಂದ ಸಾಗಿವೆ.

ಇದುವರೆಗಿನ ಪಯಣದಲ್ಲಿ ಒಮ್ಮೆ ಹಿಂದಿರುಗಿ ನೋಡಿದರೆ...

- ನಾನು ಸದ್ಯ ಮುಂದೆ ನೋಡುತ್ತಿದ್ದೇನೆ, ಮುಂದೆ ಸಾಗುತ್ತಿದ್ದೇನೆ. ಹಿಂದೆ ನೋಡುತ್ತಿಲ್ಲ. ಯಾಕೆಂದರೆ ನಾನು ಸಾಗಬೇಕಾದ ದಾರಿ, ಮುಟ್ಟಬೇಕಾದ ಗುರಿ ತುಂಬ ದೂರ ಇದೆ. ಆದರೆ ಮುಂದೆ ಒಮ್ಮೆ ಹಿಂದಿರುಗಿ ನೋಡುವ ಸಮಯ ಬರುತ್ತದೆ. ಸಂಗೀತಲೋಕ ಮಾತ್ರವಲ್ಲ, ಸಿನಿಮಾ ಕ್ಷೇತ್ರ, ಮಾಧ್ಯಮ... ಹೀಗೆ ಪ್ರತಿದಿನ ಹೊಸ ಜನರನ್ನು ಭೇಟಿಯಾಗುತ್ತಿದ್ದೇನೆ. ಇದುವರೆಗಿನ ಜರ್ನಿ ಎಕ್ಸೈಟಿಂಗ್ ಆಗಿತ್ತು ಎಂದು ಹೇಳಲು ಇಷ್ಟಪಡುತ್ತೇನೆ.